

**Gangadhara Bhat**

57m ·

ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ನನ್ನನ್ನು ಸನ್ಮಾನಿಸಿದ ಗೋವಿಂದ ದಾಸ ಕಾಲೇಜು, ಸುರತ್ಕಲ್ ನ ಆಡಳಿತ ಮಂಡಳಿ ಯವರಿಗೆ ಮತ್ತು ಸಂಯೋಜಕರಿಗೆ ಹೃತ್ಪೂರ್ವಕ ಅಭಿನಂದನೆಗಳು ಮತ್ತು ತುಂಬು ಹೃದಯ ದ ಕೃತಜ್ಞತೆಗಳು.

ಒಂದು ದಿನದ ಹವಾಮಾನ ಬದಲಾವಣೆ ಮತ್ತು ಕೃಷಿ : ಪ್ರಭಾವ, ರೂಪಾಂತರ ಮತ್ತು ತಗ್ಗಿಸುವಿಕೆ ಕುರಿತ ರಾಷ್ಟ್ರೀಯ ಸಮಾಲೋ ಚನೆ /ವಿಚಾರ ಸಂಕಿರಣ ವನ್ನು ಯಶಸ್ವಿಯಾಗಿ ಆಯೋಜಿಸಿದ ಹಾಗೂ ಈ ವಿಚಾರ ಸಂಕಿರಣದಲ್ಲಿ ನನ್ನನ್ನು ಸನ್ಮಾನಿಸಿದ ಗೋವಿಂದ ದಾಸ ಕಾಲೇಜು, ಸುರತ್ಕಲ್ ನ ಆಡ ಳಿತ ಮಂಡಳಿ ಯವರಿಗೆ ಅಭಿನಂದನೆಗಳು ಮತ್ತು ತುಂಬು ಹೃದಯ ದ ಕೃತಜ್ಞತೆಗಳು.

ರಾಷ್ಟ್ರೀಯ ವಿಚಾರ ಸಂಕಿರಣ ನಡುವೆ ನನ್ನನ್ನು ಕರೆಸಿ, ಶಾಲು ಹೊದಿಸಿ, ಫಲ ತಾಂಬೂಲ, ಸನ್ಮಾನ ಪತ್ರ ವನ್ನು ಕೊಟ್ಟು ಸನ್ಮಾನಿಸಿದ ಗೋವಿಂದ ದಾಸ ಕಾಲೇಜು, ಸುರತ್ಕಲ್ ಅವರಿಗೆ ನಾನು ಚಿರಋಣಿ. ನಾನೊಬ್ಬ ಅಧ್ಯಾಪಕನಾಗಿ ನನಗೆ ಸಿಕ್ಕಿದ ಈ ಸನ್ಮಾನ ನನಗೆ ಸಂತೋಷ, ಆತ್ಮ ವಿಶ್ವಾಸ ಮತ್ತು ಸಂತ್ರಪ್ತಿ ಯನ್ನು ತಂದುಕೊಟ್ಟಿದೆ. ಗೋವಿಂದ ದಾಸ ಕಾಲೇಜು ಆಡಳಿತ

ಮಂಡಳಿ ಗೆ ಹೇಗೆ ಕೃತಜ್ಞತೆ ಸಲ್ಲಿಸಬೇಕೆಂದು ನನಗೆ ತಿಳಿಯುತ್ತಿಲ್ಲ. ನೀವು ಮಾಡಿದ ಸನ್ಮಾನ ಕ್ಕಾಗಿ ನನ್ನ ಹೃದಯಾಂತರಾಳದ ವಂದನೆಗಳು/ ಅಭಿನಂದನೆಗಳು.

ಗೋವಿಂದ ದಾಸ ಕಾಲೇಜಿನ ಆಡಳಿತ ಮಂಡಳಿ ಯವರಿಗೂ,ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀಯುತ E. ಜನಾರ್ಧನ , ನಿವೃತ್ತ ಹಿರಿಯ ವಿಜ್ಞಾನಿಗಳು, VSSC, ತಿರುವನಂತಪುರ ಮತ್ತು P. ಕೃಷ್ಣಮೂರ್ತಿ, ಕಾಲೇಜಿನ ಪ್ರಾಂಶುಪಾಲರು ಹಾಗೂ ವಿಚಾರ ಸಂಕಿರಣದ ಸಂಯೋಜಕರಾದ
Dr. ಶರತ್ ಕುಮಾರ್, ರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥರು, ಇವರಿಗೆ ತುಂಬು ಹೃದಯದ ಕ್ರತಜ್ಞತೆಗಳು.

ನಮಸ್ಕಾರ

ಪ್ರೊಫೆಸರ್ ಹೆಜಮಾಡಿ ಗಂಗಾಧರ ಭಟ್
ಸಾಗರ ಭೂವಿಜ್ಞಾನ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ
ಮಂಗಳೂರು


GOVINDA DASA COLLEGE, SURATHKAL
D. K., Karnataka


GOVINDA DASA COLLEGE, SURATHKAL
D. K., Karnataka
(Managed by H. V. Sangha (R.), Surathkal)
National Conference on
Climate Change and Agriculture : Impacts,
Adaptation and Mitigation
NCCCAIAM - 2021
GOVINDA DASA COLLEGE, SURATHKAL

# ರಸಾಯನ ಶಾಸ್ತ್ರ ವಿಭಾಗ

# ಗೋವಿಂದ ದಾಸ ಕಾಲೇಜು

ಸುರತ್ಕಲ್ – 575 014

## ಡಾ. ಹೆಜಮಾಡಿ ಗಂಗಾಧರ ಭಟ್

ಅವರಿಗೆ ಅರ್ಪಿಸುವ



# ಸನ್ಮಾನ ಪತ್ರ

ಶ್ರೀ ಹೆಜಮಾಡಿ ಗಂಗಾಧರ ಭಟ್ ಇವರು ಉಡುಪಿ ತಾಲೂಕು ಹೆಜಮಾಡಿಯ ಶ್ರೀ ಶ್ರೀಧರ ಭಟ್ ಮತ್ತು ಶ್ರೀಮತಿ ಇಂದಿರಮ್ಮ ದಂಪತಿಗಳ ಪುತ್ರನಾಗಿ 1959 ಜೂನ್ 25 ರಂದು ಜನಿಸಿದರು. ತಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಶಿಮಂತೂರು, ಕಿನ್ನಿಗೋಳಿಯ ಶ್ರೀ ಶಾರದಾ ಹೈಸ್ಕೂಲ್‌ನಲ್ಲಿ ಪೂರೈಸಿ ವಿಜ್ಞಾನದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಅಧ್ಯಯನಗಳನ್ನು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಸಿದರು. ಎಂ. ಫಿಲ್ ಮತ್ತು ಪಿ. ಎಚ್‌ಡಿ ಪದವಿಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದಿಂದ ಪಡೆದರು.

ಮಂಗಳೂರು ವಿವಿಯ ಸಾಗರ ಭೂವಿಜ್ಞಾನ ವಿಭಾಗದಲ್ಲಿ ಶಿಕ್ಷಕ–ಸಂಶೋಧಕವೃತ್ತಿಯನ್ನು ಆರಂಭಿಸಿ ಸುಮಾರು 28 ವರ್ಷಗಳ ದೀರ್ಘಾವಧಿಯ ಸೇವೆ ಸಲ್ಲಿಸಿದ್ದಾರೆ. ಈಗ 12 ವರ್ಷಗಳಿಂದ ಪ್ರಾಧ್ಯಾಪಕರಾಗಿ ಹೊಣೆಯನ್ನು ನಿರ್ವಹಿಸುತ್ತಿದ್ದಾರೆ. ದೂರಸಂವೇದನೆ (Remote Sensing), ಭೂಗರ್ಭಶಾಸ್ತ್ರ (Geology), ಕರಾವಳಿ ಪ್ರಕ್ರಿಯೆಗಳು (Coastal Processe), ನೈಸರ್ಗಿಕಪ್ರಕೋಪಗಳು, ಅಂತರ್ಜಲ ಸಂರಕ್ಷಣೆ ಮುಂತಾದ ವಿಷಯಗಳ ಬಗ್ಗೆ ಬಹಳಷ್ಟು ವೈಜ್ಞಾನಿಕಲೇಖನಗಳನ್ನು ರಚಿಸಿದ್ದು, ಅವು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಇವರ ಮಾರ್ಗದರ್ಶನದಲ್ಲಿ ಹತ್ತು ವಿದ್ಯಾರ್ಥಿಗಳ ಪಿಎಚ್. ಡಿ. ಸಂಶೋಧನ–ಅಧ್ಯಯನ ಮತ್ತು ಮಹಾಪ್ರಬಂಧರಚನೆ–ಮಂಡನೆಗಳು ಯಶಸ್ವಿಯಾಗಿ ಪೂರೈಸಿವೆ. ಈಗಲೂ ಆರು ವಿದ್ಯಾರ್ಥಿಗಳು ಅವರ ಅಧೀನರಾಗಿ ಉನ್ನತಸಂಶೋಧನೆಗಳನ್ನು ನಡೆಸುತ್ತಿದ್ದಾರೆ.

ಭಾರತೀಯ ಬಾಹ್ಯಾಕಾಶ ಸಂಶೋಧನ ಸಂಸ್ಥೆ (ISRO), ಕೇಂದ್ರ ಪರಿಸರ ಮತ್ತು ಅರಣ್ಯಸಚಿವಾಲಯ (MoEF), ನೌಕಾ ಸಂಶೋಧನ ಮಂಡಳಿ (NRB), ಕೇಂದ್ರ ಭೂವಿಜ್ಞಾನ ಸಚಿವಾಲಯ (MoES) ಎಂಬ ರಾಷ್ಟ್ರೀಯ ಸಂಸ್ಥೆಗಳು ಇವರ ಸಂಶೋಧನೆಗೆ ಧನಸಹಾಯವನ್ನಿತ್ತು ಪುರಸ್ಕರಿಸಿವೆ. 2002 ರಲ್ಲಿ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ (INSA ) ಫೆಲೋಶಿಪ್ ಗಳಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿರುವ ಇವರು ಹವಾಮಾನ ವೈಪರೀತ್ಯ ಹಾಗೂ ಕೃಷಿ ವಲಯಕ್ಕೆ ಸಂಬಂಧಿಸಿದಂತೆ ಜನಹಿತಕಾರಿಯಾದ ಅನೇಕ ವೈಜ್ಞಾನಿಕ ತಥ್ಯಗಳ ಕುರಿತಾಗಿ ಲೇಖನಗಳನ್ನು ಬರೆದು ಜ್ಞಾನಪ್ರಸಾರ ಮಾಡುತ್ತಿದ್ದಾರೆ. ಶ್ರೀಯುತರ ಸಾಧನೆ – ಯಶಸ್ಸುಗಳು ಸಕಲರಿಗೆ ಪ್ರೇರಕವೂ ಮಾರ್ಗದರ್ಶಕವೂ ಆಗಿವೆ.

ಇಂದು ಕರ್ನಾಟಕ ರಾಜ್ಯ ವಿಜ್ಞಾನ ಹಾಗೂ ತಂತ್ರಜ್ಞಾನ ಅಕಾಡೆಮಿ ಮತ್ತು ರಸಾಯನಶಾಸ್ತ್ರ ವಿಭಾಗ, ಗೋವಿಂದದಾಸ ಕಾಲೇಜು, ಸುರತ್ಕಲ್ ಇವರ ಸಹಭಾಗಿತ್ವದಲ್ಲಿ ನಡೆದ 'ಹವಾಮಾನ ಬದಲಾವಣೆ ಮತ್ತು ಕೃಷಿ; ಪರಿಣಾಮಗಳು, ರೂಪಾಂತರ ಮತ್ತು ತಗ್ಗಿಸುವಿಕೆ' ಎಂಬ ರಾಷ್ಟ್ರೀಯ ಸಮ್ಮೇಳನದಲ್ಲಿ ಈ ಮಹನೀಯರಿಗೆ ಪ್ರೀತ್ಯಾದರಗಳೊಂದಿಗೆ ಗೌರವ ಸಲ್ಲಿಸುತ್ತ ಸಮ್ಮಾನಪತ್ರವನ್ನು ಸಮರ್ಪಿಸುತ್ತಿದ್ದೇವೆ.

**ಡಾ. ಶರತ್ ಕುಮಾರ್**
ಮುಖ್ಯಸ್ಥರು, ಸ್ನಾತಕೋತ್ತರ ರಸಾಯನಶಾಸ್ತ್ರವಿಭಾಗ
ಅಧ್ಯಕ್ಷರು, ರಾಷ್ಟ್ರೀಯ ಸಮ್ಮೇಳನ ಸಮಿತಿ

**ಪ್ರೊ. ಕೃಷ್ಣಮೂರ್ತಿ ಪಿ.**
ಪ್ರಾಚಾರ್ಯರು


GOVINDA DASA COLLEGE, SURATHKAL
D. K., Karnataka
(Managed by H. V. Sangha (R.), Surathkal)
National Conference on
Climate Change and Agriculture : Impacts, Adaptation and Mitigation
(NCCCAIAM - 2021)
20 March, 2021
Organised by :
Specialist in CATALYSTS
KSTA


DASA CO
SURATHKAL
(Managed by H. V. S
Surathkal)
National Co
on
ange and
re : Impacts,
ptation
ation
(NCCCA


DASA COLLEGE, SURATHKAL
(Managed by H. V. (R.), Surathkal)
National
Change and
Impacts,
gation
2021